# ಕನ್ನಡದ ಪ್ರಮುಖ ನಾಟಕಕಾರರು ಮತ್ತು ಅವರ ಕೊಡುಗೆ

**ವಸಂತ್***

**DOI: https://doi.org/10.5281/zenodo.22108024**

**ABSTRACT**

ಕನ್ನಡ ಸಾಹಿತ್ಯದಲ್ಲಿ ನಾಟಕವು ದೃಶ್ಯ-ಶ್ರವ್ಯ ಮಾಧ್ಯಮವಾಗಿ ಕೇವಲ ಮನರಂಜನೆಯಷ್ಟೇ ಅಲ್ಲದೆ, ಸಮಾಜಮುಖಿ ಚಿಂತನೆಗಳನ್ನು ಬಿತ್ತುವ ಪ್ರಬಲ ಅಸ್ತ್ರವಾಗಿ ಬೆಳೆದಿದೆ. ಟಿ.ಪಿ. ಕೈಲಾಸಂ ಅವರು ಹಾಸ್ಯ ಹಾಗೂ ವಿಡಂಬನೆಗಳ ಮೂಲಕ ಮಧ್ಯಮ ವರ್ಗದ ಬದುಕು ಮತ್ತು ಸ್ತ್ರೀ ಶೋಷಣೆಯನ್ನು ಅನಾವರಣಗೊಳಿಸಿದರೆ, ಶ್ರೀರಂಗರು ರಾಜಕೀಯ, ಆರ್ಥಿಕ ಹಾಗೂ ಕೌಟುಂಬಿಕ ಸಮಸ್ಯೆಗಳನ್ನು ಅತ್ಯಂತ ವಾಸ್ತವಿಕ ನೆಲೆಯಲ್ಲಿ ವಿಶ್ಲೇಷಿಸಿದರು. ಗಿರೀಶ್ ಕಾರ್ನಾಡ್ ಮತ್ತು ಚಂದ್ರಶೇಖರ ಕಂಬಾರರು ಪುರಾಣ, ಇತಿಹಾಸ ಹಾಗೂ ಜಾನಪದದ ಅಂಶಗಳನ್ನು ಸಮಕಾಲೀನ ತಲ್ಲಣಗಳಿಗೆ ಅತ್ಯದ್ಭುತವಾಗಿ ಬೆಸೆದು ಕನ್ನಡ ರಂಗಭೂಮಿಗೆ ಅಂತರರಾಷ್ಟ್ರೀಯ ಮನ್ನಣೆ ತಂದುಕೊಟ್ಟರು. ಜೊತೆಗೆ, ಕುವೆಂಪು ಹಾಗೂ ಮಾಸ್ತಿಯವರು ಪೌರಾಣಿಕ ಮತ್ತು ಚಾರಿತ್ರಿಕ ವಸ್ತುಗಳಿಗೆ ಹೊಸ ತಾತ್ವಿಕ ದರ್ಶನವನ್ನು ನೀಡಿ, ಮೌಢ್ಯ ಹಾಗೂ ಸಾಮಾಜಿಕ ಅಸಮಾನತೆಗಳನ್ನು ದಿಟ್ಟವಾಗಿ ಪ್ರಶ್ನಿಸಿದರು. ಹೀಗೆ, ಭಿನ್ನ-ವಿಭಿನ್ನ ನಾಟಕಕಾರರು ತಮ್ಮ ವಿಶಿಷ್ಟ ದೃಷ್ಟಿಕೋನ ಹಾಗೂ ಪ್ರಯೋಗಶೀಲತೆಯ ಮೂಲಕ ಸಮಗ್ರ ಕನ್ನಡ ನಾಟಕ ಪರಂಪರೆಯನ್ನು ಶ್ರೀಮಂತಗೊಳಿಸಿದ ಬಗೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ.

**KEYWORDS:** ಕನ್ನಡ ನಾಟಕ ಸಾಹಿತ್ಯ, ರಂಗಭೂಮಿ ಪ್ರಯೋಗ, ಸಾಮಾಜಿಕ ವಾಸ್ತವ, ಜಾನಪದ ಮತ್ತು ಪುರಾಣ, ನಾಟಕಕಾರರ ಕೊಡುಗೆ.

* **ವಸಂತ್,** ಸಂಶೋಧನಾ ವಿದ್ಯಾರ್ಥಿ, ಎಸ್.ವಿ.ಪಿ. ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ.

ಕನ್ನಡ ಸಾಹಿತ್ಯವು ತನ್ನದೇ ಆದ ವಿಶಾಲ ಇತಿಹಾಸವನ್ನು ಹೊಂದಿದೆ. ಇದು ಕಾವ್ಯ, ಕಥೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳಿಗಿಂತ ನಾಟಕ ಪ್ರಕಾರವು ಪ್ರಮುಖ ಸಾಹಿತ್ಯ ಪ್ರಕಾರವಾಗಿದೆ. ಇದು ಸಂಭಾಷಣೆಗಳಿಂದ ಕಟ್ಟುವ ಸಾಹಿತ್ಯ ಬಂಧವಾಗಿದೆ. ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ ಪ್ರಕಾರದಲ್ಲಿ ನಾಟಕ ಸಾಹಿತ್ಯವು ಮಹತ್ವವಾದ ಸ್ಥಾನವನ್ನು ಪಡೆದಿದೆ. ನಾಟಕವು ಕಲಾಪ್ರಕಾರವಾಗಿ ಮತ್ತು ಸಾಹಿತ್ಯಪ್ರಕಾರವಾಗಿ ಅತ್ಯಂತ ಶ್ರೇಷ್ಠವೆಂದು ಕೆಲವು ಕವಿಗಳು, ಲಾಕ್ಷಣಿಕರು, ವಿದ್ವಾಂಸರು, ತತ್ವಶಾಸ್ತ್ರಜ್ಞರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ನಾಟಕವು ದೃಶ್ಯ ಹಾಗೂ ಶ್ರವ್ಯ ಎಂಬ ಎರಡು ಭಾಗವಾಗಿ ವಿಭಾಗಿಸಬಹುದು. ಆದರೆ ನಾಟಕವು ದೃಶ್ಯ ಮತ್ತು ಶ್ರವ್ಯ ಎರಡಕ್ಕೂ ಸೇರುತ್ತದೆ.

ನಾಟಕವು ಸಂಕೀರ್ಣ ಜಾತಿಗೆ ಸೇರಿದ ಕಲಾ ಪ್ರಕಾರವಾಗಿದ್ದು, ಕಲೆ ಎಂದರೆ ರಂಗಭೂಮಿಗೆ ಸಂಬಂಧಿಸಿದಾಗಿದೆ. ರಂಗಭೂಮಿ ಎಂದರೆ ಆಟ ಅಥವಾ ನಾಟಕ ಆಡುವ ಸ್ಥಳವೆಂದು ಸಾಮಾನ್ಯ ಅರ್ಥವಿದೆ. ಕಲಾಪ್ರಕಾರದ ಎಲ್ಲಾ ಸ್ವಭಾವದ ಜನರನ್ನು ಏಕಕಾಲದಲ್ಲಿ ರಂಜಿಸುವ ಸಾಹಿತ್ಯ ಪ್ರಕಾರವೆಂದರೆ ಅದು ನಾಟಕವಾಗಿದೆ. ಸಾಹಿತ್ಯ ಪ್ರಕಾರವು ಸಹೃದಯರನ್ನು ಆಕರ್ಷಿಸಿ ರಂಜಿಸುವ ಮಾಧ್ಯಮವಾಗಿದೆ. ಒಟ್ಟಾರೆಯಾಗಿ ನಾಟಕ ಸಾಹಿತ್ಯವು ಸಾಮೂಹಿಕ ಮನೋರಂಜನೆಯನ್ನು ನೀಡುವ ಅತ್ಯಂತ ಪ್ರಮುಖ ಮಾಧ್ಯಮವಾಗಿದೆ.

"ಕಾವ್ಯೇಷು ನಾಟಕಂ ರಮ್ಯಂ"- ಕಾವ್ಯದಲ್ಲಿ ನಾಟಕವೇ ರಮ್ಯವಾದುದೆಂದು ನಮ್ಮವರು ಮೊದಲಿನಿಂದಲೂ ಹೇಳಿದ್ದಾರೆ. "ಲೋಕವೃತ್ತಾನುಕರಣಂ ನಾಟ್ಯಂ" ಎಂದು ಭರತ ತನ್ನ ಕೃತಿಯಲ್ಲಿ ಹೇಳಿದ್ದಾನೆ. ಲೋಕದ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಮನುಷ್ಯನಿಗೆ ಬಗೆಬಗೆಯ ಕಷ್ಟ ಕೋಟಲೆಗಳು, ಸುಖ-ದುಃಖ, ಸೋಲು-ಗೆಲುವು, ವ್ಯಕ್ತಿ ಮನೋಧರ್ಮಗಳಿದ್ದು ಬದುಕಿನಲ್ಲಿ ದುಃಖವಿದ್ದರೂ ಅದರ ಅನುಕೃತಿಯಲ್ಲಿ ಒಂದು ವಿಧದ ಸುಖವಿರುತ್ತದೆ. ಮನುಷ್ಯ ಜೀವನ ರಂಗದಲ್ಲಿ ಅಸಂಬದ್ಧವಾದುದು ರಂಗದ ಮೇಲೆ ಸುಸಂಬದ್ಧವಾಗಿ ಕಾಣಿಸಿಕೊಳ್ಳುತ್ತದೆ ಎಂದು ಭರತ ತನ್ನ ಕೃತಿಯಲ್ಲಿ ಹೇಳಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ನಾಟಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಪ್ರಮುಖ ನಾಟಕಕಾರರು ಮತ್ತು ಅವರ ಕೊಡುಗೆಗಳು.

**ಟಿ.ಪಿ. ಕೈಲಾಸಂ:**

ಕನ್ನಡ ಆಧುನಿಕ ನಾಟಕದ ಪಿತಾಮಹ ಎಂದು ಪ್ರಸಿದ್ಧರಾದವರೆಂದರೆ ಟಿ.ಪಿ. ಕೈಲಾಸಂ. ತಂಜಾವೂರು ಪರಮಶಿವ ಕೈಲಾಸಂ ಇವರು ಕನ್ನಡದ ಜನರ ಮನ ಮನೆಗಳಲ್ಲಿ ಚಿರಕಾಲ ಉಳಿಯುವವರಾಗಿದ್ದಾರೆ. ಇವರ ನಾಟಕದಲ್ಲಿ ಸಾಮಾಜಿಕ ಸಮಸ್ಯೆಗಳು, ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ವ್ಯಂಗ್ಯದ ಮೂಲಕ ಚಿತ್ರಿಸಿದ್ದರು. ಇವರ ಪ್ರಮುಖ ನಾಟಕಗಳು ಟೊಳ್ಳುಗಟ್ಟಿ, ಹೋಂರೂಲು, ಅಮ್ಮಾವ್ರ ಗಂಡ ಇತ್ಯಾದಿ.

ಕನ್ನಡ ನಾಟಕ ಪರಂಪರೆಯಲ್ಲಿ ಪೌರಾಣಿಕ ವಸ್ತುಗಳಿಂದ ಸಾಮಾಜಿಕ ವಾಸ್ತವದತ್ತ ಗಮನಹರಿಸಿದವರಲ್ಲಿ ಟಿ.ಪಿ. ಕೈಲಾಸಂ ಪ್ರಮುಖರು. ತಮ್ಮ ನಾಟಕದಲ್ಲಿ ಇವರು ಸಮಾಜದ ನೈಜ ಸ್ತ್ರೀಯರನ್ನು ಪ್ರತಿನಿಧಿಸುವ ಮೂಲಕ ವಿಧವಾ ವಿವಾಹ ಸಮಸ್ಯೆ, ವೇಶ್ಯಾವೃತ್ತಿ ಮತ್ತು ಸ್ತ್ರೀ ಸ್ವಾತಂತ್ರ್ಯದಂತಹ ಜ್ವಲಂತ ಸಮಸ್ಯೆಗಳ ಮೇಲೆ ಅವರು ಬೆಳಕು ಚೆಲ್ಲಿದ್ದಾರೆ. ತಾಯ್ತನದ ಮಹತ್ವ ತ್ಯಾಗ, ಮತ್ತು ಕರುಣೆಯನ್ನು ಎತ್ತಿಹಿಡಿಯುವ ಕೈಲಾಸಂ ರವರು ವಾತ್ಸಲ್ಯಮಯಿ, ತಾಯಂದಿರ ಅಪೂರ್ವ ಚಿತ್ರಣವನ್ನು ನೀಡಿದ್ದಾರೆ. ಸಮಾಜದ ಸಂಪ್ರದಾಯಗಳನ್ನು ಒಪ್ಪಿಕೊಳ್ಳುತ್ತಲೇ, ಮಹಿಳೆಯರ ಮೇಲಿನ ಶೋಷಣೆಯನ್ನು ವಿರೋಧಿಸುವ ಅವರ

ನಿಲುವುಗಳು ಹಾಗೂ ಸ್ತ್ರೀಯರನ್ನು ವಾಸ್ತವಿಕ ರಂಗಭೂಮಿಗೆ ಪರಿಚಯಿಸುವ ಅವರ ಕ್ರಾಂತಿಕಾರಕ ಹೆಜ್ಜೆಗಳನ್ನು ವಿಶ್ಲೇಷಿಸಲಾಗಿದೆ.

ಕೈಲಾಸಂರವರ ಮೊದಲ ನಾಟಕವಾದ 'ಟೊಳ್ಳುಗಟ್ಟಿ' ಸಮಕಾಲೀನ ಸಮಾಜ ಮತ್ತು ರಂಗಭೂಮಿಗೆ ಹಿಡಿದ ಕನ್ನಡಿಯಾಗಿದೆ. ಪ್ರತಿಷ್ಠಿತ ನಾಟಕಗಾರರ ಆತ್ಮ ಪ್ರಶಂಸಾ ವಿಡಂಬನೆಯ ಗುರಿಯನ್ನಿಟ್ಟುಕೊಂಡ ಕೈಲಾಸಂ ತಮ್ಮನ್ನು ಈ ನಾಟಕದಲ್ಲಿ 'ಪ್ರಹಸನ ಪಿತಾಮಹ' ಎಂದು ಕರೆದುಕೊಂಡಿದ್ದಾರೆ. ಸಮಕಾಲೀನ ಸಮಾಜದ ಅಂಕುಡೊಂಕುಗಳನ್ನು ಹಾಸ್ಯಮಯವಾಗಿ ತಮ್ಮ ನಾಟಕಗಳಲ್ಲಿ ಚಿತ್ರಿಸಿದ ಮೊದಲ ಸಾಹಿತಿಯೆಂದು ಕೈಲಾಸಂ ಅವರನ್ನು ಗುರುತಿಸಬಹುದಾದರೂ ಅವರ ಉತ್ತಮ ನಾಟಕಗಳ ಗುರಿ ಕೇವಲ ನಗೆಯಲ್ಲ. ಪ್ರಧಾನವಾಗಿ ಹಾಸ್ಯವನ್ನೇ ಗುರಿಯಾಗಿಟ್ಟುಕೊಂಡಿರುವ 'ನಮ್ ಕ್ಲಬ್ಬು', ಅನುಕೂಲಕ್ಕೊಬ್ಬಣ್ಣ, ಸತ್ತವನ ಸಂತಾಪದಂತಹ ನಾಟಕಗಳೂ, ವಿಡಂಬನಾತ್ಮಕ ಪ್ರಸಂಗಗಳಾದ ನಮ್ ಕಂಪನಿ, ಬಂಡ್ವಾಳಿಲ್ಲದ ಬಡಾಯಿ, ವೈದ್ಯನ ವ್ಯಾಧಿಯಂತಹ ನಾಟಕಗಳನ್ನು ಹೊರತುಪಡಿಸಿದರೆ ಅವರ ಉಳಿದ ನಾಟಕಗಳಿಗೆ ಹಾಸ್ಯದ ಹೊರಹೊದಿಕೆಯಿದೆ. ತಿರುಳಿನಲ್ಲಿ ಗಂಭೀರ ವಿಶ್ಲೇಷಣೆಯಿದೆ. ಬಹಿಷ್ಕಾರ, ತಾಳಿಕಟ್ಟೋಕೂಲಿನೆ, ಸೂಳೆ, ಪೋಲಿಕಿಟ್ಟಿಯಂತಹ ನಾಟಕಗಳಲ್ಲಿ ವಿಷಾದವೇ ಸ್ಥಾಯಿಯಾಗಿದೆ.

ಮಾನವನ ಅಸಹನೀಯ ದುಃಖವನ್ನು ಮರೆಸಲು ಕೈಲಾಸಂ ಹಾಸ್ಯದ ಮೊರೆಹೊಕ್ಕರೂ ಆಳದಲ್ಲಿ ಅವರೊಬ್ಬ ಮಹಾದುಃಖಿಯಾಗಿದ್ದರೆಂಬುದನ್ನು ಅವರ ನಾಟಕಗಳೇ ನಮಗೆ ಮನದಟ್ಟು ಮಾಡಿಕೊಡುತ್ತವೆ. ಆಳದಲ್ಲಿ ಅವರೊಬ್ಬ ಮಹಾದುಃಖಿಯಾಗಿದ್ದರೆಂಬುದನ್ನು ಅವರ ನಾಟಕಗಳೇ ನಮಗೆ ಮನದಟ್ಟು ಮಾಡಿಕೊಡುತ್ತವೆ. ಬದುಕಿನಲ್ಲಿ ಎದುರಾಗುವ ಕಣ್ಣೀರಿನ ಕಡಲನ್ನು ಹಾಸ್ಯದ ಹರಿಗೋಲಿನಿಂದ ದಾಟಬೇಕೆಂಬುದು ಕೈಲಾಸಂರವರ ಆದರ್ಶವಾಗಿತ್ತು. ಆದರೆ ಈ ಆದರ್ಶ ಕೆಲವೊಮ್ಮೆ ಪಲಾಯನವಾದವಾಗುವ ಸಂಭವವಿದೆ.

**ಆದ್ಯ ರಂಗಾಚಾರ್ಯ:**

''ಶ್ರೀರಂಗ'' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರಾಗಿದ್ದಾರೆ. ಸಾಮಾಜಿಕ ಮತ್ತು ಐತಿಹಾಸಿಕ ನಾಟಕಗಳಿಗೆ ಹೆಸರುವಾಸಿಯಾದವರು. ಹರಿಜನ್ವಾರ, ಅಶ್ವಮೇಧ, ಪ್ರಚಂಡ ಪರಿಣಯ. ಶ್ರೀರಂಗರು ವಾಸ್ತವವಾದಿ ನಾಟಕಕಾರರು. ಸಮಕಾಲೀನ ವಸ್ತು ಮಹತ್ವದ್ದಾಗಿ ಕಂಡಿದೆ. ತಮ್ಮ ಸುತ್ತಲಿನ ಪರಿಸರವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿದ ಇವರು ಮನುಷ್ಯನ ಅನುಭವದ ವಲಯದಲ್ಲಿ ಇಲ್ಲಿಯವರೆಗೆ ಸಾಹಿತಿಗಳು ಗಮನಿಸದ ಹಲವಾರು ಹೊಸ ಸಂಗತಿಗಳನ್ನು ಗುರುತಿಸಿದ್ದರು. ಮಾನವನ ಲೈಂಗಿಕ ಸಮಸ್ಯೆಗಳು, ಪ್ರೇಮ, ವಿವಾಹ, ಕೌಟುಂಬಿಕ ಸಂಬಂಧಗಳು, ಬಡತನ, ನಿರುದ್ಯೋಗ ಇಂತಹ ಅನೇಕ ಜ್ವಲಂತ ಸಮಸ್ಯೆಗಳು ಶ್ರೀರಂಗರ ಹರಿತವಾದ ವಿಶ್ಲೇಷಣೆಗೆ ಗುರಿಯಾಗಿವೆ. ಅಲ್ಲಿಯವರೆಗೆ ನಿಷಿದ್ಧವೆಂದು ಭಾವಿಸಿದ್ದ ಅಥವಾ ಮಹತ್ವದ್ದಲ್ಲವೆಂದು ಪರಿಗಣಿಸಿದ್ದ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಹೊಸ ಬಗೆಯಲ್ಲಿ ಚರ್ಚಿಸಿದ ಅವರ ವಿಚಾರಗಳು ಮಧ್ಯಮ ವರ್ಗಕ್ಕೆ ಕ್ರಾಂತಿಕಾರಕವಾಗಿ ಕಂಡುಬಂದವು.

ಕೈಲಾಸಂ ಅವರು ತಮ್ಮ ಮಧ್ಯಮ ವರ್ಗದ ಪರಿಸರವನ್ನು ಪ್ರಧಾನವಾಗಿ ಸಾಮಾಜಿಕ ನೆಲೆಯಿಂದ ಪರೀಕ್ಷಿಸಿದರೆ, ಶ್ರೀರಂಗರು ರಾಜಕೀಯ, ಸಾಮಾಜಿಕ, ಆರ್ಥಿಕವಾದ ಮೂರು ನೆಲೆಯಲ್ಲಿ ಶೋಧಿಸಿದ್ದಾರೆ. ಮೂವತ್ತರ ದಶಕದಲ್ಲಿ ಅವರು ರಚಿಸಿದ ಹರಿಜನ್ವಾರ,

ಸಂಧ್ಯಾಕಾಲ, ಸಂಸಾರಿಗ ಕಂಸ ಇಂತಹ ನಾಟಕಗಳಲ್ಲಿ ಜಾತಿ ಸಮಸ್ಯೆ, ವರ್ಗಸಮಸ್ಯೆಗಳನ್ನು ವಿಶ್ಲೇಷಿಸಿರುವ ಎಚ್ಚರದಲ್ಲಿ ಪ್ರಗತಿಪರ ಒಲವುಗಳನ್ನು ಗುರುತಿಸಬಹುದು. ಬರೀ ಮಾತಿನಲ್ಲಿ ಸಮಾಧಾನ ಪಡೆಯುವುದಿಲ್ಲ. ಅವರ ಸಾಮಾಜಿಕ ಪ್ರಜ್ಞೆಯಲ್ಲಿ ಕೃತಿಯತ್ತ ಒಲವಿದೆ. ಸಮಾಜದ ಸುಧಾರಣೆ, ಸಮಾಜದ ಉದ್ಧಾರ ಇವುಗಳತ್ತ ಹರಿಯುವ ಒಂದು ವಿಚಾರಧಾರೆ ಇವರ ನಾಟಕದಲ್ಲಿದೆ.

**ಗಿರೀಶ್ ಕಾರ್ನಾಡ್:**

ಕನ್ನಡ ರಂಗಭೂಮಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿದ ನಾಟಕಕಾರರು. ಪುರಾಣ, ಇತಿಹಾಸ ಮತ್ತು ಸಮಕಾಲೀನ ಜೀವನವನ್ನು ಸಮನ್ವಯಗೊಳಿಸಿದ ನಾಟಕಗಳನ್ನು ರಚಿಸಿದರು. ಇವರ ಪ್ರಮುಖ ನಾಟಕಗಳೆಂದರೆ ಯಯಾತಿ, ತುಘಲಕ್, ಹಯವದನ, ನಾಗಮಂಡಲ.

ನಾಟಕೀಯ ಅಭಿವ್ಯಕ್ತಿಗೆ ಕಂಬಾರರಂತೆ ಸಮಗ್ರವಾಗಿ ಜನಪದ ರಂಗಭೂಮಿಯನ್ನು ಬಳಸಿಕೊಂಡ ಆಧುನಿಕ ಕನ್ನಡ ನಾಟಕಕಾರ ಮತ್ತೊಬ್ಬರಿಲ್ಲವೆನ್ನಬಹುದು. ಉಳಿದವರೆಲ್ಲ ವೈವಿಧ್ಯತೆಗಾಗಿ ತಮ್ಮ ಒಂದೊಂದು ನಾಟಕದಲ್ಲಿ ಜನಪದ ರಂಗಭೂಮಿಯ ತಂತ್ರಗಳನ್ನು ಆಧರಿಸಿದರೆ, ಕಂಬಾರರ ಎಲ್ಲಾ ನಾಟಕಗಳ ಜೀವದ್ರವ್ಯವೇ ಜಾನಪದವಾಗಿದೆ. ಆಧುನಿಕ ಸಂವೇದನೆಗಳನ್ನು ಜಾನಪದ ಶೈಲಿಯಲ್ಲಿ ಮಂಡಿಸಲು ಕಂಬಾರರು ನಡೆಸಿದ ಪ್ರಯೋಗ ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟವಾದುದು. ಕನ್ನಡದ ಸಂದರ್ಭದಲ್ಲೂ ಹೊಸ ರಂಗಭೂಮಿಯೊಂದರ ಅನ್ವೇಷಣೆಗೆ ಅವರ ಕೊಡುಗೆ ಅದ್ವಿತೀಯವಾದುದು.

ಜನಪದ ತಂತ್ರದಲ್ಲಿ ಕಂಬಾರರು ಬರೆದ ಮೊದಲ ನಾಟಕ 'ಋಷ್ಯಶೃಂಗ'. 'ಹೇಳ್ತೇನ ಕೇಳ' ಎಂಬ ಅವರ ಆಧುನಿಕ ಲಾವಣಿಯ ಮುಂದಿನ ಭಾಗವೇ 'ಋಷ್ಯಶೃಂಗ'ದ ಕಥಾವಸ್ತು. ಊರಿನ ದನಗಳನ್ನು ತಿಂದ ಜನರನ್ನು ಕಾಡುತ್ತಿದ್ದ ಏಳು ಪಟ್ಟೆ ಹುಲಿಯನ್ನು ಊರ ಗೌಡ ಬೇಟೆಯಾಡಲು ಹೊರಟಿದ್ದು, ಬೇಟೆಗೆ ಹೋದ ಗೌಡನನ್ನು ಕೊಂದು ಊರ ಹೊರಗಿನ ಬಾವಿಯಲ್ಲಿ ಹಾಕಿ, ಅವನ ವೇಷವನ್ನು ಹೊತ್ತು ರಾಕ್ಷಸನೊಬ್ಬನು ಊರನ್ನು ಪ್ರವೇಶಿಸಿದ್ದು, ಗೌಡತಿಯನ್ನು ಕೂಡಿಬಾಳಿ ಗಂಡುಮಗನನ್ನು ಪಡೆದು ಊರನ್ನು ಆಳಿದ್ದು... ಮುಂತಾದ ಕಥಾ ಹಿನ್ನೆಲೆಯನ್ನು ಪಡೆದಿರುವ ಈ ನಾಟಕದ ವಸ್ತುವೇ ಜಾನಪದೀಯವಾಗಿದೆ.

ಗಿರೀಶ್ ಕಾರ್ನಾಡರ 'ಹಯವದನ' ನಾಟಕವು ಅಪೂರ್ಣತೆಯನ್ನು ಪುರಾಣ ಕಥೆಯೊಂದರ ನೆರವಿನಿಂದ ಜನಪದ ಶೈಲಿಯಲ್ಲಿ ವಿವೇಚಿಸುತ್ತದೆ. ಈ ನಾಟಕದ ಕಥಾವಸ್ತುವಿಗೆ ಥಾಮಸ್ ಮಾನ್‌ನ ಜರ್ಮನ್ ನೀಳ್ಗತೆಯೊಂದಕ್ಕೆ ತಾವು ಋಣಿಯಾಗಿರುವುದಾಗಿ ನಾಟಕಕಾರರು ಹೇಳಿಕೊಂಡಿದ್ದಾರೆ. 'ವೇತಾಲ ಪಂಚ ವಿಂಶತಿ ಕಥಾ'ದ ಆರನೆಯ ಕಥೆ, ಥಾಮಸ್ ಮಾನ್‌ನ ಮೂಲ ಆಕರ. ದೇವದತ್ತ, ಪದ್ಮಿನಿ, ಕಪಿಲರ ಪ್ರಸಂಗವನ್ನು ನಾಟಕ ರೂಪಕ್ಕೆ ಅಳವಡಿಸಲು ಕಾರ್ನಾಡರು ವಿಶೇಷ ಶ್ರಮವಹಿಸಿಲ್ಲ. ವಸ್ತು, ರಚನೆ, ಪಾತ್ರ ನಿರೂಪಣೆ, ವೈಚಾರಿಕತೆಗಳಿಂದಾಗಿ ಅವರು ಜರ್ಮನ್ ನೀಳ್ಗತೆಯನ್ನೇ ಅನುಸರಿಸಿದ್ದಾರೆ.

ಕಾರ್ನಾಡ್ ರವರ 'ಯಯಾತಿ' ನಾಟಕವನ್ನು ಅವಲೋಕಿಸಿದಾಗ ಮೇಲ್ನೋಟಕ್ಕೆ ಪುರಾಣದ ಪೂರ್ವಕಥೆಯನ್ನೇ ಸಾರುವಂತೆ ತೋರಿಬಂದರೂ, ಹಳೆಯದರಲ್ಲಿ ಹೊಸತನ್ನು ಹೇಳುವ ಚಿಕಿತ್ಸಕ ನೋಟ, ತೀವ್ರತರದ ಸನ್ನಿವೇಶ ಸೃಷ್ಟಿ, ಸಂಭಾಷಣೆಯ ಚುರುಕುತನ, ಇವುಗಳಿಂದಾಗಿ ಸಮಾಜದ ಸಮಕಾಲೀನ ಸಹಜ ಬದುಕಿನ ಸವಾಲುಗಳನ್ನು ಎದುರಿಸುವ

ರೀತಿ–ರಿವಾಜುಗಳನ್ನು ಕಾರ್ನಾಡರು ಬಹಳ ಮಾರ್ಮಿಕವಾಗಿ ವಿವಿಧ ಪಾತ್ರಗಳ ಮೂಲಕ ಧ್ವನಿಸುತ್ತ, ಭೂತಕ್ಕಿಂತ ವರ್ತಮಾನದ ಸಂಗತಿಗಳೇ ಆಸಕ್ತಿ ತಾಳುತ್ತಾ, ಅದರ ಅವಶ್ಯಕತೆಗಳನ್ನು ಒತ್ತಿ ಹೇಳುತ್ತಾ ನಾಟಕ ಅಂತ್ಯಕ್ಕೆ ತೆರೆ ಎಳೆಯುತ್ತದೆ. ಪುರಾಣದ ಕಥೆಯ ಮುಂದುವರಿದ ಭಾಗವಷ್ಟೇ ಅಲ್ಲ, ಬದಲಾವಣೆ ಬಯಸಿದ ನಾಟಕವೂ ಹೌದು. ಯಯಾತಿ–ದೇವಯಾನಿಯೊಂದಿಗೆ ಆದ ವಿವಾಹದ ನಂತರದ ಸಂಗತಿಗಳನ್ನು ಇಲ್ಲಿ ಎಳೆಎಳೆಯಾಗಿ ಬಿಡಿಸಿ ತೋರಿಸಲಾಗಿದೆ. ಕ್ಷುಲ್ಲಕ ವಿಚಾರವೊಂದು ಎಬ್ಬಿಸಿದ ಸಣ್ಣ ಅಲೆಗೆ ಅರಸುವಂಶ, ಕ್ಷತ್ರಿಯವಂಶ ಮತ್ತು ಆರ್ಯವಂಶದ ಮನೆತನಗಳು ನಾಶವಾಗುತ್ತವೆ. ಸ್ವಪ್ರತಿಷ್ಠೆ, ವೈಯಕ್ತಿಕ ಹಠ, ಈರ್ಷ್ಯೆ ಸ್ವಭಾವದ ಮನಸ್ಕರು ಬಾಳಿನಲ್ಲಿ ತಾವೂ ಸುಖಿಸದೆ, ಇತರರಿಗೂ ಸುಖ ನೀಡದೆ ಮಹಾಸ್ವಾರ್ಥಿಗಳಾಗಿರುವುದನ್ನು ಇದು ಧ್ವನಿಸುತ್ತದೆ. ಆಗಬೇಕಾದ ಕಾರ್ಯಕ್ಕೆ ಆಲೋಚಿಸದೆ, ಆಗಿಹೋದ ಕಾರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಅದಕ್ಕಾಗಿ ಕೊರಗುತ್ತಾ ದ್ವೇಷ ಸಾಧಿಸುವ ದುರಂತದ ಕಿಡಿಗಳಾಗಿ ದೇವಯಾನಿ–ಶರ್ಮಿಷ್ಠೆಯರು ಕಾಣಿಸಿಕೊಳ್ಳುತ್ತಾರೆ. ಕಿಡಿಯ ಪ್ರಖರತೆಯಲ್ಲಿ ಯಯಾತಿ, ಪುರು ಮತ್ತು ಚಿತ್ರಲೇಖೆಯರು ಪಡಬಾರದ ಯಾತನೆಯನ್ನು ಅನುಭವಿಸುವ ಕಥೆಯಿದೆ. ನಾಟಕದಲ್ಲಿ ಬರುವ ಮೂಲಪಾತ್ರಗಳು ಹೊಸ ಸಂವೇದನೆಯನ್ನು ಬಡಿದೆಬ್ಬಿಸಿದರೆ ನೂತನ ಪಾತ್ರಗಳು ಆಧುನಿಕ ಚಿಂತನೆಗಳನ್ನು ಬಯಸುವುದನ್ನು ಕಾರ್ನಾಡರು ಯಶಸ್ವಿಯಾಗಿ ತಿಳಿಸಿಕೊಟ್ಟಿದ್ದಾರೆ.

**ಚಂದ್ರಶೇಖರ ಕಂಬಾರ:**

ಜಾನಪದ ಸಂಸ್ಕೃತಿ ಮತ್ತು ಗ್ರಾಮೀಣ ಜೀವನವನ್ನು ನಾಟಕಗಳಲ್ಲಿ ಚಿತ್ರಿಸಿದವರು. ಪ್ರಮುಖ ನಾಟಕಗಳು ಜೋಕುಮಾರಸ್ವಾಮಿ, ಸಿರಿಸಂಪಿಗೆ, ಮಹಾಮಾಯಿ.

ಕಂಬಾರರು ಜನಪದ ತಂತ್ರವನ್ನು 'ಜೋಕುಮಾರಸ್ವಾಮಿ'ಯಲ್ಲಿ ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಇಲ್ಲಿನ ಒಂದೊಂದು ದೃಶ್ಯವೂ ಸಂಪೂರ್ಣವಾಗಿ ಸಮರ್ಥವಾಗಿ ಅರಳುತ್ತದೆ. ಫಲವತ್ತತೆಯ ಸಂಕೇತವಾದ ಜೋಕುಮಾರಸ್ವಾಮಿಯ ಪುರಾಣ ಕಥೆಯೊಂದಿಗೆ 'ಉಳುವವನೇ ಭೂಮಿಯ ಒಡೆಯ' ಎಂಬ ಆಧುನಿಕ ಸಮಾಜವಾದವನ್ನೂ ಹೊಂದಿಸುವುದು ನಾಟಕದ ಆಶಯವಾಗಿದೆ.

'ಜೋಕುಮಾರಸ್ವಾಮಿ'ಯಲ್ಲಿ ಪುರಾಣ ಪ್ರಪಂಚ ಮತ್ತು ವಾಸ್ತವ ಪ್ರಪಂಚಗಳ ಸಮ್ಮಿಶ್ರಣದಿಂದ ಅಪೂರ್ವ ಬಗೆಯ ನಾಟಕೀಯತೆಗೆ ಅವಕಾಶವಾಗಿದೆಯಾದರೂ ತಾರ್ಕಿಕವಾಗಿ ಕೆಲವು ಸಮಸ್ಯೆಗಳಿವೆ. ಲೈಂಗಿಕ ಪೌರುಷವನ್ನು ಮನುಷ್ಯನ ಶಕ್ತಿ, ಸಾಮರ್ಥ್ಯದ ಸಂಕೇತವಾಗಿ ಬಳಸುವ ಕಂಬಾರರು ಅದರ ಅತಿರಂಜನೆಗೆ ತೊಡಗಿ ಒಮ್ಮೊಮ್ಮೆ ಸರಳವಾಗಿಸಿಬಿಡುತ್ತಾರೆ. ತನ್ನ ಹೊಲವನ್ನು ಗೌಡನಿಂದ ಉಳಿಸಿಕೊಳ್ಳುವುದಕ್ಕೆ ಬಸವಣ್ಣನು ಒಪ್ಪಿಕೊಳ್ಳುವ 'ಪಣ' ತೀರಾ ಶಿಥಿಲವಾದ ಮಾದರಿಯದು. ಇದು ಉಳುವವನ ನ್ಯಾಯವಾದ ಒಡೆತನವನ್ನು ಹಿನ್ನೆಲೆಗೆ ಸರಿಸಿ, ಭಾವನಾ ಪ್ರಧಾನ ಸಾಹಸಕ್ಕೆ ಮಹತ್ವ ಕೊಡುವ ಪ್ರಯತ್ನವಾಗಿದೆ. ಗಂಡು ಹೆಣ್ಣಿನ ಪ್ರಣಯಾರಾಧನೆ, ಹೆಣ್ಣಿನ ತಾಯ್ತನದ ಹಂಬಲ.... ಇಂತಹ ಸಂಗತಿಗಳನ್ನು ದುರಂತರಮ್ಯವಾಗಿ ನಿರೂಪಿಸುವಲ್ಲಿ ನಾಟಕಕಾರರು ಯಶಸ್ವಿಯಾಗಿದ್ದರೂ ಭೂಮಿಯ ಒಡೆತನವನ್ನು ಕುರಿತ ಅವರ ನಿಲುವು ವ್ಯಂಗ್ಯಕ್ಕೆ ದಾರಿ ಮಾಡಿಕೊಡುತ್ತದೆ.

ಕಂಬಾರರ 'ಜೈಸಿದನಾಯ್ಕ'ದಲ್ಲಿಯೂ ಸರ್ವಾಧಿಕಾರಿಯೊಬ್ಬನ ವಿರುದ್ಧ ನಡೆದ ಹೋರಾಟವೇ ಪ್ರಧಾನವಾಗಿದ್ದು, ವಾಸ್ತವದ ನಿರೂಪಣೆಗೆ ಅಲ್ಲಿ ಮಹತ್ವ ಸಿಕ್ಕಿದೆ. ಜನಪದ

ರಂಗಭೂಮಿಯ ತಂತ್ರ ಅಥವಾ ವಿದ್ಯುಕ್ತ ಆಚರಣೆಗಳ ನೆರವನ್ನು ಆಶ್ರಯಿಸದೆ, ವಾತಾವರಣ ಸೃಷ್ಟಿಗೆ ಮಾತ್ರ ಜಾನಪದವನ್ನು ಇಲ್ಲಿ ಬಳಸಿದ್ದಾರೆ.

**ಕುವೆಂಪು:**

ಕುವೆಂಪುರವರ 'ಹ್ಯಾಮ್ಲೆಟ್' ನಾಟಕದ ಪ್ರೇರಣೆಯಿಂದ ರಚಿತವಾದ ಕುವೆಂಪುರವರ 'ರಕ್ತಾಕ್ಷಿ' ಕನ್ನಡದ ಐತಿಹಾಸಿಕ ನಾಟಕಗಳಲ್ಲಿ ಗಣನೀಯವಾದುದು. ಕುವೆಂಪುರವರ ಯಾವ ನಾಟಕದಲ್ಲಿಯೂ ಕಂಡುಬರದ ನಿರಾಳವಾದ ಧೋರಣೆಯೊಂದನ್ನು ರಕ್ತಾಕ್ಷಿಯ ಪಾತ್ರ ರಚನೆಯಲ್ಲಿ ಗುರುತಿಸಬಹುದಾಗಿದೆ. ದುರಂತ ನಾಟಕವಾಗಿ ರಕ್ತಾಕ್ಷಿ ಯಶಸ್ವಿಯಾಗದಿದ್ದರೂ ಜನಪ್ರಿಯ ನಾಟಕವಾಗಿ ಹೆಸರು ಪಡೆದಿದೆ. ನಾಟಕವು ಕ್ರಿಯಾತ್ಮಕವಾಗಿದ್ದು ಸನ್ನಿವೇಶದಿಂದ ಸನ್ನಿವೇಶಕ್ಕೆ ವೇಗವಾಗಿ ಮುಂದುವರಿಯುತ್ತದೆ. ಇವರ 'ಜಲಗಾರ' ನಾಟಕದಲ್ಲಿ ಮನುಷ್ಯನ ಕಾಯಕಕರ್ಮ ಮತ್ತು ಸಾಮಾಜಿಕ ಅಸಮತೋಲನದ ಒಂದು ಚಿತ್ರಣವಿದೆ. ಸಮಾಜಕ್ಕೆ ಅಂಟಿರುವ ಕಳಂಕದ ಕೊಳೆಯನ್ನು ತೊಳೆಯಲು ಜಲಗಾರನೊಬ್ಬ ಬೇಕು ಎಂಬುದು ಅವರ ಆಶಯವಾಗಿದೆ. ಈ ನಾಟಕದಲ್ಲಿ ಬರುವ ಪ್ರತಿಯೊಂದು ಪಾತ್ರವೂ ಒಂದೊಂದು ಸಮಸ್ಯೆಗೆ ಪ್ರತೀಕವಾಗಿದೆ.

ಕುವೆಂಪುರವರ ಶ್ಮಶಾನ ಕುರುಕ್ಷೇತ್ರ ನಾಟಕವು ಪ್ರತಿಭೆಯ ಪೂರ್ಣಾಭಿವ್ಯಕ್ತಿಗೆ ಒಳ್ಳೆಯ ಸಂಕೇತವಾಗಿರುವ ನಾಟಕವಾಗಿದೆ. ಇಲ್ಲಿ ಕವಿಯ ಪ್ರತಿಭೆಯು ಲೌಕಿಕದಿಂದ ಅಲೌಕಿಕಕ್ಕೂ ಭಗವದನುಸಂಧಾನದ ಆಧ್ಯಾತ್ಮಕ್ಕೂ ಕೈಚಾಚುತ್ತದೆ. ಒಂದಂಗುಲದಷ್ಟೂ ನೆಲವನ್ನು ಕೊಡಲಾರೆ ಎಂದಷ್ಟು ಲೌಕಿಕಕ್ಕೆ ಅಂಟಿಕೊಂಡಿದ್ದ ದುರ್ಯೋಧನ ಸಹ ಶ್ರೀಕೃಷ್ಣ ಸಾಕ್ಷಾತ್ಕಾರದಿಂದ ಕನಸೊಡೆದು ಮೋಕ್ಷಗಾಮಿಯಾಗುತ್ತಾನೆ. ಇಲ್ಲಿ ಬರುವ ಕಲ್ಕಿ, ದ್ವಾಪರ, ಕೃಷ್ಣ, ರುದ್ರ ಮುಂತಾದ ಪಾತ್ರಗಳು ಕೃತಿಯಲ್ಲಿ ದೈವೀ ಆವರಣವನ್ನು ವಿಸ್ತರಿಸುತ್ತವೆ. ಶ್ಮಶಾನ ಕುರುಕ್ಷೇತ್ರ ಹತ್ತು ದೃಶ್ಯಗಳುಳ್ಳ ನಾಟಕವಾಗಿದೆ. ಹದಿನೆಂಟು ದಿನಗಳು ರಣಕೋಲಾಹಲದಿಂದ ತುಂಬಿತುಳುಕಿದ ಮಹಾಭಾರತ ಸಂಗ್ರಾಮ ಸಂಪೂರ್ಣವಾಗಿ ಕೊನೆಗೊಂಡ ದಿನದ ಘೋರ ವಿಷಣ್ಣ ರಾತ್ರಿ ರೌದ್ರ, ಭಯಾನಕ, ಭೀಭತ್ಸ ಸನ್ನಿವೇಶಗಳ ಮಧ್ಯೆಯೇ ನಾಟಕವನ್ನು ಆರಂಭಿಸುತ್ತಾರೆ. ಕವಿ ಅದು ಭೀಮ, ದುರ್ಯೋಧನರ ಗದಾಯುದ್ಧ ಮುಗಿದ ರಾತ್ರಿ ಈ ನಾಟಕದಲ್ಲಿ ಹತ್ತು ದೃಶ್ಯಗಳು ಒಂದಾದ ಮೇಲೆ ಒಂದರಂತೆ ಕಾಣಿಸಿಕೊಳ್ಳುತ್ತವೆ. ಇದರಲ್ಲಿ ಬರುವ ದ್ವಾಪರ ಮತ್ತು ಕಲಿಯ ಪ್ರಸಂಗ, ದುರ್ಯೋಧನ ಮತ್ತು ಕೃಷ್ಣರ ಪ್ರಸಂಗ, ಮುದುಕಿ ಮತ್ತು ಮಾತೆಯರ ಚಿತ್ರಣ, ಪಾಂಡವರ ಮಾನಸಿಕ ತೊಳಲಾಟ, ಶ್ರೀಕೃಷ್ಣ ಕೊನೆಯಲ್ಲಿ ರಣರಂಗದಲ್ಲಿ ಮುಕ್ತಿಗೆ ಈಡಾಗುವ ಸನ್ನಿವೇಶ ಕುವೆಂಪುರವರ ಸ್ವಂತ ಸೃಷ್ಟಿಯಾಗಿದೆ.

ಕುವೆಂಪುರವರ ಬೆರಳ್ಗೆ ಕೊರಳ್ ಉತ್ತಮ ನಾಟಕವಾದರೂ ಜೀವನದ ಹರವು, ದರ್ಶನ, ಸಂಕೀರ್ಣತೆ, ಸಮಕಾಲೀನ ಜೀವನದ ಸಾವು–ನೋವಿನ ಸಮಷ್ಟಿ ಸ್ವರೂಪವನ್ನು ಕಾಣಬಹುದು. ಕುವೆಂಪುರವರ ಶೂದ್ರತಪಸ್ವಿ ನಾಟಕವು ಶೂದ್ರ ತಪಸ್ಸು ಮಾಡಬಾರದು ಎನ್ನುವ ಶ್ರೀಸಾಮಾನ್ಯನಿಗೆ ವಿರುದ್ಧವಾದ ಮೂಢನಂಬಿಕೆಯನ್ನು ಈ ನಾಟಕದಲ್ಲಿ ಬಣ್ಣಿಸಿದ್ದಾರೆ. ಶಂಬೂಕ ತಪಸ್ಸು ಮಾಡುವುದು ಅಧರ್ಮ ಅವನನ್ನು ಕೊಲ್ಲಬೇಕು ಎಂಬ ಬ್ರಾಹ್ಮಣನ ವಾದವನ್ನು ಅತ್ಯಂತ ಸೂಕ್ಷ್ಮವಾಗಿ ವಿವೇಚಿಸಿದ್ದಾರೆ.

**ಮಾಸ್ತಿ ವೆಂಕಟೇಶ ಅಯ್ಯಂಗಾರ್:**

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆ. 'ಕಾಕನಕೋಟೆ' ಮಾಸ್ತಿ ವೆಂಕಟೇಶ ಅಯ್ಯಂಗಾರ್ ರವರ ಶ್ರೇಷ್ಠ ನಾಟಕವಾಗಿದ್ದು,

ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಕಲಾಕೃತಿಯಾಗಿ ಕಾಕನಕೋಟೆಗಿರುವ ಅಸಾಧಾರಣ ಉಜ್ವಲತೆಯನ್ನು ಮತ್ತು ಸಾಂಸ್ಕೃತಿಕವಾಗಿ ಅದಕ್ಕಿರುವ ಮಹತ್ವವನ್ನು ಬೇರ್ಪಡಿಸಿ ಚರ್ಚಿಸುವುದು ಕಷ್ಟವಾಗುತ್ತದೆ. ಅವೆರಡೂ ಜೀವ–ದೇಹ ನ್ಯಾಯದಂತೆ ಅಭಿನ್ನವಾಗಿವೆ. ರಾಜಕೀಯ ಇತಿಹಾಸದ ದಾಖಲೆಯಾಗಿ ಕಾಕನಕೋಟೆಯು ಪಾಳೆಯಗಾರಿಕೆ ಪ್ರಭುತ್ವಶಾಹಿಯಿಂದ ರಾಜಪ್ರಭುತ್ವಕ್ಕೆ ವರ್ಗಾಯಿಸಲ್ಪಡುವ ಸಂಸ್ಕೃತಿಯೊಂದರ ಸಂಕ್ರಮಣ ಕಾಲವನ್ನು ತಿಳಿಸುತ್ತದೆ.

ಮಾಸ್ತಿಯವರ ತಾಳಿಕೋಟೆ ಐತಿಹಾಸಿಕ ಸಂದರ್ಭವೊಂದನ್ನು ಖಾಸಗಿ ಬದುಕಿನ ದುರಂತದ ಹಿನ್ನೆಲೆಯನ್ನು ಚರ್ಚಿಸುತ್ತದೆ. ವಿಜಯನಗರದ ಅರಸು ರಾಮರಾಯ ಮುಸ್ಲಿಂ ಕನ್ಯೆಯೊಬ್ಬಳನ್ನು ಪ್ರೀತಿಸಿ, ಮದುವೆಯಾಗದೆ, ಅವಳಿಂದ ಮಗನೊಬ್ಬನನ್ನು ಪಡೆದು, ಆತನನ್ನು ತಾನೇ ಸಾಕಿ ಆಶ್ರಯಕೊಟ್ಟು ಸೇನಾಪತಿಯನ್ನಾಗಿ ಮಾಡುತ್ತಾನೆ. ಮತಾಂಧನಾಗಿ ಬೆಳೆದ ಈ ರುಸ್ತುಂಷಹನೇ ರಾಮರಾಯನನ್ನು ವಿಶ್ವಾಸಘಾತುಕತನದಿಂದ ಕೊಲ್ಲುತ್ತಾನೆ. ತನ್ನ ತಂದೆಯೆಂದು ತಿಳಿಯದೆ ರಾಮರಾಯನನ್ನು ಕೊಲ್ಲುವ ರುಸ್ತುಂಷಹನ ಪಾತ್ರ ರಚನೆಯಲ್ಲಿ ಉಜ್ವಲ ನಾಟಕೀಯತೆಯಿದೆಯಾದರೂ ರಾಮರಾಯ ವ್ಯಕ್ತಿತ್ವದಲ್ಲಿ ದುರಂತ ನಾಯಕ ವ್ಯಕ್ತಿ ಸಂಗತಿಗಳನ್ನು ಮಾನವೀಯ ನೆಲೆಯಲ್ಲಿ ಚಿತ್ರಿಸಬಯಸುವ ಈ ನಾಟಕ ಭಾವನಾಮಯವಾಗಿದ್ದು ಇತಿಹಾಸಕ್ಕಿಂತ ಕಲ್ಪನೆಗೆ ಹೆಚ್ಚು ಅವಕಾಶಕೊಟ್ಟಿದೆ.

ಕನ್ನಡ ಸಾಹಿತ್ಯದಲ್ಲಿ ಅನೇಕ ನಾಟಕಕಾರರು ತಮ್ಮದೇ ಆದ ಕೊಡುಗೆಯನ್ನು ನೀಡಿ ನಾಟಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅಧ್ಯಯನದ ಹಿತದೃಷ್ಟಿಯಿಂದ ಕೆಲವೇ ಕೆಲವು ಪ್ರಸಿದ್ಧ ನಾಟಕಕಾರರು ನೀಡಿದ ಕೊಡುಗೆಯನ್ನು ಇಲ್ಲಿ ಸ್ಮರಿಸಲಾಗಿದೆ.

ನಾಟಕವು ಸಾಮೂಹಿಕ ಕಲೆಯಾದರೂ ಅದೊಂದು ಸಾಮಾಜಿಕ ಕಲೆಯೂ ಹೌದು. ಸಾಹಿತ್ಯ ಮತ್ತು ಸಮಾಜದ ನಡುವಿನ ಸಂಬಂಧದ ಕುರಿತು ಪ್ರತಿಯೊಂದು ಕಾಲ–ದೇಶಗಳಲ್ಲೂ ಚರ್ಚೆ ನಡೆದಿದೆ. ನಾಟಕದ ವಸ್ತು ಯಾವುದೇ ಆಗಿರಲಿ ಈ ರಂಗಕ್ರಿಯೆಯನ್ನು ಜೀವಂತವಾಗಿಟ್ಟುಕೊಂಡು ಬಂದವರು ಪ್ರೇಕ್ಷಕರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ನಾಗರತ್ನಮ್ಮ ಮತ್ತು ಡಾ. ಬಿ. ವೆಂಕಟರಾಮಣ್ಣ (ಸಂ.), (2016), ಕನ್ನಡ ನಾಟಕಾವಲೋಕನ, ಮೈಸೂರು: ಉಷಾ ಪ್ರಕಾಶನ.
2. ಮರುಳಸಿದ್ದಪ್ಪ ಕೆ., (1996), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಲಿಪಿ ಪ್ರಕಾಶನ.
3. ಬಸವರಾಜ ಡೋಣೂರ, (2007), ಕನ್ನಡ ನಾಟಕ ಮತ್ತು ರಂಗಭೂಮಿ, ಧಾರವಾಡ: ನೀಲಪರ್ವತ ಪ್ರಕಾಶನ.
4. ಮರುಳಸಿದ್ದಪ್ಪ ಕೆ., (1973), ಕನ್ನಡ ನಾಟಕ ವಿಮರ್ಶೆ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.